PW : 1

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## OS No.19/2021

ದಿನಾಂಕಃ 05.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಪಾಟಿಸವಾಲು 1 ನೇ ಪ್ರತಿವಾದಿ ಪರ ಶ್ರೀ S.G.M. ವಕೀಲರಿಂದಃ**

1. ನನ್ನ ತಾಯಿಯ ತಮ್ಮ ಗೋಪಾಲ ರೈ ಸುಮಾರು 55 ವರ್ಷಕ್ಕೂ ಮೇಲ್ಪಟ್ಟು ನಮ್ಮ ಮನೆಯಲ್ಲಿಯೇ ನಮ್ಮ ಮನೆಯ ಸದಸ್ಯರಾಗಿ ವಾಸವಿದ್ದರು ಎಂದರೆ ಸರಿ. ಅವರನ್ನು ನನ್ನ ತಂದೆಯೇ ಗುರುವಾಯೂರಿನಲ್ಲಿ ಮದುವೆ ಮಾಡಿಸಿರುತ್ತಾರೆ ಎಂದು ಕೇಳಿರುತ್ತೇನೆ. ಗೋಪಾಲ ರೈ ಮತ್ತು ಅವರ ಹೆಂಡತಿ ಸ್ವಾತಿಯವರು ಸತ್ಯ ಸಾಯಿಬಾಬಾ ರವರ ಪರಮಭಕ್ತರು ಎಂದರೆ ಸರಿ. ಅವರಿಗೆ 4 ಜನ ಹೆಣ್ಣು ಮಕ್ಕಳಿದ್ದು, ಅವರೂ ಕೂಡಾ ನಮ್ಮ ಮನೆಯಲ್ಲಿಯೇ ವಾಸವಿದ್ದು, ನಮ್ಮ ಮನೆಯ ಪಕ್ಕದ ಶಾಲೆಗೆ ಹೋಗಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಹಿರಿಯರ ಪೈಕಿ ಅತ್ಯಂತ ಹೆಚ್ಚು ವಿದ್ಯಾವಂತರು ಗೋಪಾಲ ರೈ ರವರು ಎಂದರೆ ಸರಿ. ಅವರು ಕೊಳ್ತಿಗೆ ಸಹಕಾರ ಬ್ಯಾಂಕ್ ನ್ನು ಶುರು ಮಾಡಿ ಎಲ್ಲಾ ಕೆಲಸಗಳನ್ನು ನಿರ್ವಹಿಸಿ ಕೊನೆಗೆ MD ಆಗಿ ನಿವೃತ್ತರಾಗಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಯಾವುದೇ ವ್ಯವಹಾರಗಳಾಬೇಕಾದರೆ ನನ್ನ ತಂದೆ ಗೋಪಾಲ್ ರೈ ರವರ ಸಲಹೆ ಕೇಳುತ್ತಿದ್ದರು ಎಂದರೆ ಸರಿ. ಆ ಕಾರಣ ನನ್ನ ತಂದೆ ಚೆಲ್ಯಡ್ಕದಲ್ಲಿದ್ದ ಜಾಗವನ್ನು ನನ್ನ ಸೋದರ ಮಾವನ ಹೆಸರಿನಲ್ಲಿ ಮಾಡಿದ್ದರು ಎಂದರೆ ಸರಿ. ವೀಲು ನಾಮೆಯ ವ್ಯವಹಾರವನ್ನು ನನ್ನ ತಂದೆ ಗೋಪಾಲ್ ರೈ ರವರ ಸಲಹೆ ಕೇಳಿ ಮಾಡಿರುತ್ತಾರೆ ಎಂದರೆ ನಾನು ಹೊರಗೆ ಇದ್ದ ಕಾರಣ ನನಗೆ ಗೊತ್ತಿಲ್ಲ. ವೀಲು ನಾಮೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಗೋಪಾಲ್ ರೈ ರವರ ಬಳಿ ಕೇಳಿದರೆ ಗೊತ್ತಾಗಬಹುದು ಎಂದರೆ ಸರಿ. ಈಗಲೂ ನಾವು ಅವರೊಂದಿಗೆ ಒಳ್ಳೆಯ ಬಾಂಧವ್ಯದಲ್ಲಿದ್ದೇವೆ. ಅವರು ನನ್ನನ್ನು, 1ನೇ ಪ್ರತಿವಾದಿಯವರನ್ನು ಸಮಾನವಾಗಿ ಪರಿಗಣಿಸುತ್ತಾರೆ ಎಂದರೆ ಸರಿ. ನಾನು ಅಳಿಯ ಸಂತಾನ

ಕಾನೂನಿಗೆ ಒಳಪಟ್ಟ ಕಾರಣ ಸೋದರ ಮಾವನಿಗೆ ವಿಶೇಷ ಸ್ಥಾನವಿದೆ ಎಂದರೆ ಸರಿ. ವಿಲ್ ಗಳಿಗೆ ಗೋಪಾಲ್ ರೈ ರವರ ಸಾಕ್ಷಿ ಇರುವ ಕಾರಣ ಅವರನ್ನು ನ್ಯಾಯಾಲಯದ ಮುಂದೆ ಸಾಕ್ಷ ವಿಚಾರಣೆ ಮಾಡಬಹುದಾ ಎಂದರೆ ಮಾಡಬಹುದು.

2. ಮಂಜುನಾಥ ಆಳ್ವಾ ರವರಿಂದ ಪ್ರಮಾಣಪತ್ರವನ್ನು ವಿಲ್ ಗೆ ಸಹಿ ಹಾಕಿರುವುದಿಲ್ಲ ಎಂದು ತೋರಿಸುವ ಉದ್ದೇಶಕ್ಕೆ ಹಾಕಿಸಿರುತ್ತೇನೆ. ಅದೇ ರೀತಿ ನನ್ನ ಸೋದರ ಮಾವನವರ ಪ್ರಮಾಣಪತ್ರ ಯಾಕೆ ಹಾಕಿಸಿಲ್ಲ ಎಂದರೆ ನಾನು ಕೇಳಿರುತ್ತೇನೆ, ಮೊದಲ ವಿಲ್ ಗೆ ಅವರ ಸಹಿ ಮಾಡಿದ್ದರಿಂದ ಪ್ರಮಾಣಪತ್ರದ ಅಗತ್ಯ ಕಾಣಿಸಲಿಲ್ಲ. ಮಂಜುನಾಥ ಆಳ್ವಾ ರವರು ವೀಲಿಗೆ ಸಹಿ ಹಾಕಿದ್ದ ಬಗ್ಗೆ ನಾನು ನನ್ನ ಮಾವನವರ ಬಳಿ ಕೇಳಿರುವುದಿಲ್ಲ. 2ನೇ ವಿಲ್ ನ ಬಗ್ಗೆ ನಾನು ಮಾವನಲ್ಲಿ ವಿಚಾರಿಸಿರುತ್ತೇನೆ, ಆದರೆ ಅವರಿಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಗೋಪಾಲ ರೈ ರವರನ್ನು ಮೊದಲು ಸಾಕ್ಷ್ಯವಿಚಾರಣೆ ಮಾಡಲು ನನ್ನಿಂದ ಯಾವುದೇ ಅಭ್ಯಂತರವಿರುವುದಿಲ್ಲ. ಅವರಿಗೆ 90 ವರ್ಷ ವಯಸ್ಸಾಗಿದ್ದು, ಆರೋಗ್ಯ ಚೆನ್ನಾಗಿದೆ. ನನ್ನ ಕುಟುಂಬದ ಎಲ್ಲಾ ಮಾಹಿತಿ ಹಾಗೂ ಎಲ್ಲಾ ವ್ಯವಹಾರಗಳನ್ನು ತಿಳಿದಿದ್ದವರು ನನ್ನ ಸೋದರಮಾವ ಮಾತ್ರ ಎಂದರೆ ಸರಿ.

3. ಹೆಣ್ಣುಮಕ್ಕಳು ಮದುವೆಯಾಗಿ ಹೋಗಿದ್ದರಿಂದ ನಾನು ಕರ್ತವ್ಯದ ನಿಮಿತ್ತ ವಿದೇಶದಲ್ಲಿ ಇದ್ದುದ್ದರಿಂದ 1ನೇ ಪ್ರತಿವಾದಿಯೇ ನಮ್ಮ ತಂದೆ ತಾಯಿಯ ಯೋಗಕ್ಷೇಮ ನೋಡಿಕೊಂಡಿರುತ್ತಾರೆ ಎಂದರೆ ಮನೆಯಲ್ಲಿದ್ದುದ್ದರಿಂದ ಅವರೇ ನೋಡಿಕೊಂಡಿರುತ್ತಾರೆ. ಆ ಕಾರಣದಿಂದ 1ನೇ ಪ್ರತಿವಾದಿ ತಂದೆ ತಾಯಿಯ ವಿಶೇಷ ಪ್ರೀತಿಗೆ ಪಾತ್ರರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಅವರು 2/3 ರಷ್ಟು ಹಿಸ್ಸೆಯನ್ನು 1ನೇ ಪ್ರತಿವಾದಿಗೆ ನೀಡುವ ನಿರ್ಧಾರ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

4. 1ನೇ ಪ್ರತಿವಾದಿ ಕುಟುಂಬದ ಜಮೀನಿನೊಂದಿಗೆ ಅವರ ಸ್ವಂತ ಜಮೀನುಗಳನ್ನೂ ಕೂಡಾ ಅಭಿವೃದ್ಧಿಪಡಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಸದರಿ ಸ್ವಂತ ಜಮೀನುಗಳು ಅವರಿಗೆ ಮಂಜೂರಾಗಲು 1 ನೇ

PW : 1

ಪ್ರತಿವಾದಿ ಸರ್ಕಾರಕ್ಕೆ ಅಕ್ರಮ ಸಕ್ರಮಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸೊತ್ತಿನ ಜಮೀನುಗಳು ಚೆಕ್ ಬಂದಿಯನ್ನು ಹೇಳಲಾಗುವುದಿಲ್ಲ. ಆ ಬಗ್ಗೆ ಹೆಚ್ಚಿನ ಮಾಹಿತಿ 1ನೇ ಪ್ರತಿವಾದಿಗೆ ಇರಬಹುದು ಎಂದರೆ ಗೊತ್ತಿಲ್ಲ. ಯಾವ ಯಾವ ಸರ್ವೇ ನಂಬರ್ ಗಳಲ್ಲಿ ಏನೇನು ಕೃಷಿಯನ್ನು 1ನೇ ಪ್ರತಿವಾದಿ ಮಾಡುತ್ತಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 6-7 ವರ್ಷಗಳಿಂದ ನನ್ನನ್ನು ಅಲ್ಲಿಗೆ ಹೋಗಲು ಬಿಟ್ಟಿರುವುದಿಲ್ಲ. 2 ರಿಂದ 4 ನೇ ಪ್ರತಿವಾದಿಗಳು ದಾವಾ ಆಸ್ತಿಯ ವ್ಯವಹಾರಗಳಲ್ಲಿ ಅವರು ಭಾಗಿಯಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

5. ದಾವಾ ಆಸ್ತಿಯಲ್ಲಿರುವ ಮನೆಯನ್ನು 1966 ರಲ್ಲಿ ಕಟ್ಟಿರುತ್ತಾರೆ. ಸದರಿ ಮನೆಯ ಮೇಂಟೆನನ್ಸ್ ನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಾರೆ ಎಂದರೆ ನಾನೂ ಕೂಡಾ ಹಣ ಕಳುಹಿಸಿರುತ್ತೇನೆ, ದಾಖಲಾತಿಗಳು ಇರುತ್ತವೆ ಎನ್ನುತ್ತಾರೆ. ಈಗಾಗಲೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಕೊಳ್ತಿಗೆ ಸೇವಾ ಸಹಕಾರಿ ಬ್ಯಾಂಕ್ ನಿಂದ 1ನೇ ಪ್ರತಿವಾದಿಯು ಕೃಷಿ ಅಭಿವೃದ್ಧಿಗೆ ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಅವರೇ ಹಿಂಪಾವತಿಸುತ್ತಿದ್ದಾರೆ ಎಂದರೆ ಇರಬಹುದು. ವೈಯ ಕ್ತಿಕ ಅನುಭವದ ಮೇಲೆ ಮತ್ತು 1ನೇ ಪ್ರತಿವಾದಿಯ ಮಾಹಿತಿಯ ಮೇರೆಗೆ ದಾವಾ ಆಸ್ತಿಯ ಉತ್ಪತ್ತಿಯ ಬಗ್ಗೆ ದಾವಾ ಪತ್ರದಲ್ಲಿ ಹೇಳಿರುತ್ತೇನೆ. ಸಾಮಾನ್ಯವಾಗಿ 2/3 ರಷ್ಟು ಉತ್ಪತ್ತಿಯಲ್ಲಿ ಖರ್ಚಿಗೆ ಆಗುತ್ತದೆ ಮತ್ತು 1/3 ನಮಗೆ ಲಾಭ ಎಂದರೆ ಸರಿ. ಈಗ ಅಡಿಕೆ ಕೃಷಿಕರು ಎಲೆ ಚುಕ್ಕೆ ರೋಗ, ಕೊಳೆ ರೋಗ ಬಂದು ಸಂಕಷ್ಟದಲ್ಲಿದ್ದಾರೆ ಎಂದರೆ ಕೆಲವೊಂದು ವರ್ಷ ಹಾಗೆ ಆಗುತ್ತದೆ. ಆದ್ದರಿಂದ ಕೃಷಿ ಜಮೀನು ಮಾರಾಟ ಮಾಡಿ ಪೇಟೆಗೆ ಹೋಗುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ 1ನೇ ಪ್ರತಿವಾದಿ ಕೂಡಾ ಸಂಕಷ್ಟದಲ್ಲಿದ್ದು ಅನಿವಾರ್ಯವಾಗಿ ಕೃಷಿ ಜಮೀನು ಮುಂದುರೆಸುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ವೈಯಕ್ತಿಕವಾಗ ಯಾವುದೇ ಸಂದರ್ಭದಲ್ಲಿ ಹಣವನ್ನು ಕೃಷಿ ಕೃತಾವಳಿಗಳ ಅಭಿವೃದ್ಧಿಗೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ವೈಯಕ್ತಿಕ ನೆಲೆಯಲ್ಲಿ ಕೃಷಿ ಮಾಡಿ, ಮಂಜೂರು ಮಾಡಿಸಿಕೊಂಡಿರುವ ಜಾಗದಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಆ ರೀತಿಯ ಜಮೀನೇ ಇಲ್ಲ ಎನ್ನುತ್ತಾರೆ. ದಾವಾ ಸಿ ಆಸ್ತಿಯು 1ನೇ ಪ್ರತಿವಾದಿಗೆ ಸ್ವಂತ ನೆಲೆಯಲ್ಲಿ ಮಂಜೂರಾಗಿದ್ದು, ಅದರ ಮೇಲೆ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ರಿಂದ 4 ನೇ ಪ್ರತಿವಾದಿಯವರು 1ನೇ ಪ್ರತಿವಾದಿ ತಮ್ಮ ವಿದ್ಯಾಭ್ಯಾಸ ಮೊಟಕುಗೊಳಿಸಿ ಕೃಷಿ ಕೃತಾವಳಿಗಳನ್ನು ನೋಡಿಕೊಳ್ಳುತ್ತಿದ್ದಾಗ ಅವರಿಗೆ ಪರಿಹಾರವಾಗಿ ಹಣವನ್ನು ನಾನು ನೀಡುತ್ತಿದ್ದೆ, 2 ರಿಂದ 4 ನೇ ಪ್ರತಿವಾದಿಯವರು ನೀಡಿದ ಬಗ್ಗೆ ಗೊತ್ತಿಲ್ಲ. ಸಾಮಾನ್ಯವಾಗಿ ಪ್ರತಿ ತಿಂಗಳಿಗೆ ಎಷ್ಟು ಕೊಡುತ್ತಿದ್ದೆ ಎಂದರೆ ಬಂದಾಗ ಕೆಲವೊಮ್ಮೆ 1 ಲಕ್ಷ/ 50,000/- ಮತ್ತು ಮಕ್ಕಳ ಪೀಸು ಕಟ್ಟುತ್ತಿದ್ದೆ. ಆ ರೀತಿ ವರ್ಷಕ್ಕೆ 2-3 ಬಾರಿ ನೀಡುತ್ತಿದ್ದೆ. ಈ ಎಲ್ಲಾ ವಿಚಾರಗಳನ್ನು ಅವರ ಹಕ್ಕಿನ ಆಸ್ತಿಗಳನ್ನು ಕಬಳಿಸಲು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ಊರಿಗೆ ಬಂದಾಗ ಕೃಷಿಯ ಉತ್ಪತ್ತಿಗಳನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಈಗಲೂ ನಾನು ಕೃಷಿ ಉತ್ಪತ್ತಿಯನ್ನು ನನ್ನಷ್ಟಕ್ಕೆ ಬಂದು ತೆಗೆದುಕೊಂಡು ಹೋಗುತ್ತಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಉತ್ಪತ್ತಿ ಈಗ ದಾವಾ ಜಮೀನಿನಲ್ಲಿ ಲಭ್ಯವಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಉತ್ಪ್ರೇಕ್ಷೆ ಮಾಡಿ ಲೆಕ್ಕಾಚಾರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ನಿಪಿ12 ರ ವಿಲ್ ಪ್ರಕಾರ ಸದರಿ ವಿಲ್ ನ ಬಿ ಶೆಡ್ಯೂಲ್ ನಲ್ಲಿರುವ ಆಸ್ತಿಗಳನ್ನು ನನಗೆ ಮತ್ತು 1ನೇ ಪ್ರತಿವಾದಿಗಳಿಗೆ ಸಮಪಾಲು, ಎ ಶೆಡ್ಯೂಲ್ ನ ಆಸ್ತಿಯನ್ನು 2 ನೇ ಪ್ರತಿವಾದಿಗೆ, ಸಿ ಶೆಡ್ಯೂಲ್ ಸರ್ಕಾರಿ ಆಸ್ತಿಗಳಾಗಿರುತ್ತವೆ. ವಿಲ್ ನ ಬಗ್ಗೆ ನನ್ನ ಗಮನಕ್ಕೆ ಯಾವಾಗ ಬಂದಿರುತ್ತದೆ ಎಂದು ನೆನಪಿಲ್ಲ. ವಿಲ್ ಇದೆ ಎಂದು ಗೊತ್ತಿದೆ, ಯಾವಾಗ ಗಮನಕ್ಕೆ ಬಂತು ಎಂದು ನೆನಪಿಲ್ಲ. ವಿಲ್ ಆದ ಬಗ್ಗೆ ನನಗೆ ಯಾರು ಹೇಳಿದ್ದು ಎಂದು ನೆನಪಿಲ್ಲ. ವಿಲ್ ನ ಬಗ್ಗೆ ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಅಕ್ಕಂದಿರು ನನ್ನೊಂದಿಗೆ ಕೇಸು ಹಾಕಲು ಬಂದಿರುವುದಿಲ್ಲ. ನಿಡಿ1 ಮತ್ತು 2 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದು, ಅವು ಸಿಂಧು

ಆದ ದಾಖಲಾತಿಗಳು ಎಂದರೆ ಸರಿಯಲ್ಲ. ಸದರಿ ದಾಖಲೆಗಳ ಬಗ್ಗೆ ನನಗೆ ಪೂರ್ಣಮಾಹಿತಿ ಇದ್ದರೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಗೋಪಾಲ್ ರೈ ರವರು ಅವರ ಇಚ್ಛೆಯಂತೆ ನಿಡಿ1 ಮತ್ತು 2 ನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವುಗಳಲ್ಲಿರುವ ಸಹಿ ಹಾಗೂ ವಾಚನಗಳನ್ನು ಅವರ ಇಚ್ಛೆಯಂತೆಯೇ ಸಮಚಿತ್ತದಿಂದ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ಕೂಡಾ ನನ್ನ ಸೋದರಮಾವ ಗೋಪಾಲ ರೈ ರವರು ಸಹಿ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. 1982 ರ ವೀಲು ನಾಮೆಯನ್ನು ರದ್ದುಪಡಿಸಿ 1990 ರಲ್ಲಿ ವೀಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ 1982 ರ ವೀಲು ನಾಮೆ ಈಗ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಸದರಿ ವೀಲು ನಾಮೆಯ ಪ್ರಕಾರ ನಾನು ಯಾವುದೇ ರೀತಿಯ ಹಕ್ಕನ್ನು ಪ್ರತಿಪಾದಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಡಿ1 ಮತ್ತು 2 ವೀಲು ನಾಮೆಗಳ ಅಸಿಂಧು ಎಂದು ಕೋರದೇ ಇರುವುದರಿಂದ ಈ ದಾವೆ ನಿಲ್ಲತಕ್ಕದ್ದಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯವರು ಸಲ್ಲಿಸಿದ ಲಿಖಿತ ತಕರಾರನ್ನು ನಾನು ಓದಿ ನೋಡಿರುತ್ತೇನೆ. ಅದರಲ್ಲಿರುವ ಕೌಂಟರ್ ಕ್ಲೇಮ್ ನ ಬಗ್ಗೆ ನನಗೆ ಯಾವುದೇ ಆಕ್ಷೇಪ ಇಲ್ಲ ಎಂದರೆ ನನಗೆ ಸರ್ವೇ ನಂಬರ್ ಗಳನ್ನು ನೋಡಿ ಹೇಳಲಾಗುವುದಿಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿ ದಾವಾ ಪತ್ರದ ಬಗ್ಗೆ ಸಲ್ಲಿಸಿದ ಆಕ್ಷೇಪಣೆಗಳು ಸತ್ಯಾಂಶಗಳನ್ನು ಹೊಂದಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು, ಪುತ್ತೂರು